# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 09/2022

ಎಂ. ಡಬ್ಲ್ಯೂ- 1

**<u>ದಿನಾಂಕ 03.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

ದಿನಾಂಕ 07.07.2020 ರಂದು ಕಾರ್ಮಿಕರನ್ನು ಲೇಆಫ್ ಮಾಡಿದ್ದ ವಿಚಾರಗಳು ಕಾರ್ಮಿಕ ಸಂಘದಿಂದ ವಿವಾದ ಎತ್ತಿರುವ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ನಾನು ಹೆಚ್.ಆರ್. ವಿಭಾಗದ ಮುಖ್ಯಸ್ಥನಾಗಿರುವ ಕಾರಣ ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಗಳು ನನ್ನ ಬಳಿ ಇರುತ್ತವೆ ಎಂದರೆ ಇರಬಹುದು ಎನ್ನುತ್ತಾರೆ. ಲೇಆಫ್‌ಗೆ ಸಂಬಂಧಪಟ್ಟಂತೆ ವಿವಾದ ಎತ್ತಿರುವ ವಿಚಾರದಲ್ಲಿ ಆಡಳಿತ ವರ್ಗದವರು ಆಕ್ಷೇಪಣೆ ಮಾಡಿದ್ದರು ಎಂದರೆ ಇರಬಹುದು ಎನ್ನುತ್ತಾರೆ. ನಾವು ಹಾಕಿರುವ ಆಕ್ಷೇಪಣೆ ಹಾಗೂ ಎತ್ತಿರುವ ವಿವಾದಕ್ಕೆ ಸಂಬಂಧ ಪಟ್ಟಂತೆ ಸಂದಾನಾಧಿಕಾರಿಗಳು ಸರ್ಕಾರಕ್ಕೆ ವರದಿ ಹಾಕುವಾಗ ಲೇಆಫ್ ಕಾನೂನು ಬಾಹಿರ ವಾಗಿದೆ ಎಂದು ಮತ್ತು ಕೈಗಾರಿಕಾ ವಿವಾದ ಉಲ್ಲಂಘನೆ ಆಗಿರುತ್ತದೆ ಎಂದು ವರದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 09.08.2020 ರಂದು ಕಾರ್ಖಾನೆ ಗೇಟ್ ಬಳಿ ನಾವು ಸಿನಿಯಾರಿಟಿ ಲೀಸ್ಟನ್ನು ನಾವು ಹಾಕಿದ್ದೆವು ಎಂದರೆ ದಾಖಲೆಗಳ ಪ್ರಕಾರ ನನಗೆ ತಿಳಿದಿರುತ್ತದೆ ಎನ್ನುತ್ತಾರೆ. ಸದರಿ ಜೇಷ್ಠತಾ ಪಟ್ಟಿಯಲ್ಲಿ ಎಷ್ಟು ಜನ ಕಾರ್ಮಿಕರಿದ್ದರು ಎಂದರೆ ಒಟ್ಟಾರೆ 117 ಜನ ಕಾರ್ಮಿಕರು ಇದ್ದರು ಎನ್ನುತ್ತಾರೆ. ಸದರಿ ಜೇಷ್ಠತಾ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಜೇಷ್ಠತಾ ಪಟ್ಟಿಯು ಜೇಷ್ಠತೆಯ ಆಧಾರದ ಮೇಲೆ ಮಾಡಿರುವುದಿಲ್ಲ ಎನ್ನುವ ಬಗ್ಗೆ ಕಾರ್ಮಿಕ ಸಂಘದ ವತಿಯಿಂದ ಸಂಧಾನಾಧಿಕಾರಿಗಳು,

ಸಹಾಯಕ ಕಾರ್ಮಿಕ ಅಧಿಕಾರಿಯವರ ಮುಂದೆ ವಿವಾದ ಎತ್ತಿದ್ದರು ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನಾನು ನೋಡಿರುತ್ತೇನೆ ಎನ್ನುತ್ತಾರೆ. ಅದೇ ರೀತಿ ಸಂಘದ ವತಿಯಿಂದ ನಾವು ಹಾಕಿರುವ ಜೇಷ್ಠತಾ ಪಟ್ಟಿ ಕಾನೂನು ಬದ್ಧವಾಗಿಲ್ಲ ಎಂದು ಆಕ್ಷೇಪಣೆ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಆಕ್ಷೇಪಣೆ ಪತ್ರಕ್ಕೆ ನಾವು ಜವಾಬು ಕೊಟ್ಟಿರುತ್ತೇವೆ. ಸದರಿ ಜವಾಬ್ ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ಹಾಕಿಲ್ಲ ಎನ್ನುತ್ತಾರೆ. ಹಾಜರು ಮಾಡಲು ನಮಗೇನೂ ತೊಂದರೆ ಇಲ್ಲ ಎಂದರೆ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ.

ಸಂಧಾನಾಧಿಕಾರಿಗಳು ಜೇಷ್ಠತಾ ಪಟ್ಟಿಗೆ ಸಂಬಂಧಪಟ್ಟಂತೆ ಒಂದು ಸಂಧಾನ ನೋಟೀಸ್ ಕಳುಹಿಸಿದ್ದರು ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟಂತೆ ದಿನಾಂಕ 13.08.2020 ರ ನೊಟೀಸ್ ಪ್ರಕಾರ ದಿನಾಂಕ 17.08.2020 ಕ್ಕೆ ಸಂಧಾನ ಸಭೆ ಇರುವ ಬಗ್ಗೆ ನೊಟೀಸ್ ಜಾರಿ ಆಗಿತ್ತು ಎಂದು ನನಗೆ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಸದರಿ ನೊಟೀಸ್ ಜಾರಿ ಆದ ಮೇಲೆ 42 ಜನ ಕಾರ್ಮಿಕರನ್ನು ದಿನಾಂಕ 17.08.2020 ರಿಂದ ಅನ್ವಯವಾಗುವಂತೆ ರಿಟ್ರೆಂಚ್ ಮಾಡಿದ್ದೆವು ಎಂದರೆ ಸರಿ. ಆ ಸಮಯದಲ್ಲೂ ಕೂಡ ಕೊವೀಡ್ ಸೋಂಕಿನ ತೀವ್ರತೆ ಇತ್ತು ಎಂದರೆ ಸರಿ. ಸರ್ಕಾರದಿಂದ ಕೆಲಸಗಾರರನ್ನು ತೆಗೆಯಬಾರದು ಎಂದು ಪ್ರಕಟಣೆ ಮಾಡಿದ್ದರು ಎಂದರೆ ಸರಿ. ಆದರೂ ಅದನ್ನು ಪರಿಗಣಿಸದೇ ಕೆಲಸಗಾರರನ್ನು ಕೆಲಸದಿಂದ ತೆಗೆದಿರುತ್ತೇವೆ ಎಂದರೆ ಸಂಕಷ್ಟದಲ್ಲಿದ್ದುದ್ದರಿಂದ ತೆಗೆದಿರುತ್ತೇವೆ ಎನ್ನುತ್ತಾರೆ. ಸದರಿ 42 ಜನರನ್ನು ತೆಗೆದು ಹಾಕಿರುವುದರ ಸಂಬಂಧ ಇನ್ನೊಂದು ವಿವಾದ ಎತ್ತಿರುವ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ. ಅದಕ್ಕೆ ಸಂಬಂಧ ಪಟ್ಟಂತೆ ಸಂಧಾನ ಸಭೆಗಳು ನಡೆದಿದ್ದವು ಎಂದರೆ ಸರಿ. ಈ ವಿಚಾರವಾಗಿ ನಂಜನಗೂಡು ತಾಲ್ಲೂಕಿನ ತಹಶೀಲ್ದಾರರು ಸಹ ಮಧ್ಯ ಪ್ರವೇಶ ಮಾಡಿದ್ದರು ಎಂದರೆ ಸರಿ. ಕೊವೀಡ್ ಸೋಂಕು ಇದ್ದಿದ್ದ ಕಾರಣ ಸರ್ಕಾರದಿಂದ ತಾಲ್ಲೂಕಿನ ತಹಶೀಲ್ದಾರರು ಮಧ್ಯ ಪ್ರವೇಶ ಮಾಡಲು ಅವರಿಗೆ ಒತ್ತಡ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 10.11.2020 ರಂದು ಕೈಗಾರಿಕೆ ವಿವಾದ

ಕಾಯ್ದೆ 18(3) ಪ್ರಕಾರ ಒಂದು ಒಪ್ಪಂದ ಆಗಿತ್ತು ಎಂದರೆ ಸರಿ. ಸದರಿ ಒಪ್ಪಂದದಲ್ಲಿ ಶೀಘ್ರದಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಒಂದು ಷರತ್ತು ಇತ್ತು ಎಂದರೆ ಉತ್ಪಾದನೆ ಹೆಚ್ಚಾದ್ದರೆ ಮಾತ್ರ ತೆಗೆದುಕೊಳ್ಳುವದಾಗಿ ನಮೂದು ಇತ್ತು ಎನ್ನುತ್ತಾರೆ.

ಸದರಿ ಒಪ್ಪಂದ ಆಗಿದ್ದ ಸಮಯದಲ್ಲಿ ಯಾವುದೇ ಉತ್ಪಾದನೆ ಇರಲಿಲ್ಲ ಎಂದರೆ ಸರಿ. ಸದರಿ ಒಪ್ಪಂದ ಆದ ನಂತರ ಉತ್ಪಾದನೆ ಪ್ರಾರಂಭ ಆಗಿತ್ತು ಎಂದರೆ ಸರಿ. ಅದೇ ರೀತಿ ಉತ್ಪಾದನೆ ಅಭಿವೃದ್ಧಿಗೊಳ್ಳುತ್ತ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಒಪ್ಪಂದದಲ್ಲಿ ಈಗಾಗಲೇ ರಿಟ್ರೆಂಚ್ ಮಾಡಿರುವ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ನಮೂದಾಗಿತ್ತು ಎಂದರೆ ಉತ್ಪಾದನೆ ಅಭಿವೃದ್ಧಿಗೊಂಡರೆ ಮಾತ್ರ ತೆಗೆದುಕೊಳ್ಳುವುದಾಗಿ ನಮೂದು ಇತ್ತು ಎನ್ನುತ್ತಾರೆ. ಅದೇ ರೀತಿ ಕಾರ್ಮಿಕರಿಗೆ ಹೆಚ್ಚಿನ ಪರಿಹಾರ ಕೊಡುವ ವಿಚಾರವಾಗಿ ಚರ್ಚೆ ಮಾಡಲಾಗಿತ್ತು ಎಂದು ಒಪ್ಪಂದದಲ್ಲಿ ನಮೂದು ಇತ್ತು ಎಂದರೆ ಹೌದು. ಸದರಿ ಒಡಂಬಡಿಕೆ ಆದ ನಂತರವೂ ಕೂಡ ಕಾರ್ಮಿಕರನ್ನು ರಿಟ್ರೆಂಚ್ ಮಾಡಿದ್ದ ವಿವಾದ ಮುಂದುವರೆದಿತ್ತು ಅದರ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ. ರಿಟ್ರೆಂಚ್ ಆಗಿದ್ದ ಕಾರ್ಮಿಕರಿಗೆ ಹೆಚ್ಚುವರಿ ಪರಿಹಾರ ಕೊಡುವ ಬಗ್ಗೆ ನಾವು ಯಾವುದೇ ಚರ್ಚೆಗಳನ್ನು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಹೆಚ್ಚಿನ ಪರಿಹಾರವನ್ನು ಕೊಟ್ಟಿಲ್ಲ ಎಂದರೆ ಸರಿ. ಉತ್ಪಾದನೆ ಅಭಿವೃದ್ಧಿಗೊಂಡ ನಂತರ ರಿಟ್ರೆಂಚ್ ಆಗಿದ್ದ ಕೆಲವು ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುಲು ಪ್ರಾರಂಭ ಮಾಡಿದೆವು ಎಂದರೆ ಸರಿ. ಕೆಲಸಕ್ಕೆ ಪುನಃ ಕಾರ್ಮಿಕರನ್ನು ತೆಗೆದುಕೊಳ್ಳುವಾಗಿ ನಾವು ಜೇಷ್ಠತೆಯನ್ನು ನೋಡಿಲ್ಲ ಎಂದರೆ ವಿಭಾಗದ ಜೇಷ್ಠತೆಯ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಂಡಿರುತ್ತೇವೆ.

ನಮ್ಮ ಕಾರ್ಖಾನೆಯಲ್ಲಿ ಒಬ್ಬ ಕಾರ್ಮಿಕ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡಬೇಕಾಗಿರುತ್ತದೆ ಎಂದರೆ ಸಾಕ್ಷಿ ಕೆಲವು ವಿಭಾಗಗಳಲ್ಲಿ ಆ ರೀತಿ ಇರುತ್ತದೆ ಎನ್ನುತ್ತಾರೆ. ಇವರುಗಳನ್ನು

ತೆಗೆದುಕೊಳ್ಳುವಾಗ ಯಾರು ನಮ್ಮ ಜೊತೆ ಚೆನ್ನಾಗಿರುತ್ತಾರೋ ಅವರನ್ನು ಕೆಲಸಕ್ಕೆ ತೆಗೆದು ಕೊಳ್ಳುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಾಗ ಜೇಷ್ಠತೆ ಪಟ್ಟಿಯನ್ನು ಪರಿಗಣಿಸುತ್ತಿಲ್ಲ ಹಾಗೂ ಒಡಂಬಡಿಕೆಯನ್ನು ಉಲ್ಲಂಘನೆಯನ್ನು ಮಾಡಿರುತ್ತೇವೆ ಎಂದು ಸಂಘದ ವತಿಯಿಂದ ಪತ್ರಗಳು ಬರೆದಿರುವ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ. ಸದರಿ ಪತ್ರಕ್ಕೆ ನಮ್ಮಿಂದ ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸಾಕ್ಷಿ ಉತ್ತರ ಕೊಟ್ಟಿರುತ್ತೇವೆ ಎನ್ನುತ್ತಾರೆ. ಸದರಿ ಉತ್ತರದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿ. ನಾವು ಯಾವಾಗ ಕಾರ್ಮಿಕರನ್ನು ಪುನಃ ನೇಮಕ ಮಾಡಿಕೊಳ್ಳುತ್ತಿರಲಿಲ್ಲವೋ ಹಾಗೂ ಜೇಷ್ಠತಾ ಪಟ್ಟಿಯ ಮೇಲೆ ಕಾರ್ಮಿಕರನ್ನು ಕೆಲಸಕ್ಕೆ ತೆಗೆದು ಕೊಳ್ಳುತ್ತಿರಲಿಲ್ಲವೋ ಆಗ ಸಂಘದ ವತಿಯಿಂದ ಕಾರ್ಮಿಕರು ಸಂಧಾನಾಧಿಕಾರಿಗಳ ಮುಂದೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಅರ್ಜಿ ನೀಡಿದ್ದ ಸಂಬಂಧ ಸಂಧಾನ ನಡೆದಿತ್ತು ಹಾಗೂ ಆಡಳಿತ ವರ್ಗ ಅದರಲ್ಲಿ ಭಾಗವಹಿಸಿತ್ತು ಎಂದರೆ ನಾನು ನೋಡಿಲ್ಲ. ರಿಟ್ರೆಂಚ್ ಮಾಡಿದ್ದ ಕಾರ್ಮಿಕರಿಗೆ ಇ.ಎಸ್.ಐ.ವತಿಯಿಂದ ಅದಕ್ಕೆ ತಕರಾರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 10.11.2020 ಕ್ಕಿಂತ ಮುಂಚೆ ಆಗಿದ್ದ ಉತ್ಪಾದನೆಗಿಂತ 42 ಜನ ಕಾರ್ಮಿಕ ರನ್ನು ತೆಗೆದ ನಂತರ ಈಗ ಉತ್ಪಾದನೆ ಅಭಿವೃದ್ಧಿ ಗೊಂಡಿರುತ್ತದೆ ಎಂದರೆ ಸರಿಯಲ್ಲ. ರಿಟ್ರೆಂಚ್ ಮಾಡಿದ್ದಾಗ ಎಷ್ಟು ಉತ್ಪಾದನೆ ಆಗಿತ್ತು ಎನ್ನುವ ಬಗ್ಗೆ ದಾಖಲೆಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಇವತ್ತು ಎಷ್ಟು ಉತ್ಪಾದನೆ ಆಗುತ್ತಿದೆ ಎನ್ನುವ ಬಗ್ಗೆ ದಾಖಲೆಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಲೆಕ್ಕಪತ್ರದ ಶಾಖೆಯ ಪರವಾಗಿ ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಅದನ್ನು ಸಲ್ಲಿಸಲು ಆಡಳಿತ ಮಂಡಳಿ ಒಪ್ಪಿಗೆ ಪಡೆಯಬೇಕಾಗಿರುತ್ತದೆ.

42 ಜನ ಕಾರ್ಮಿಕರಲ್ಲಿ ಈಗ ಸುಮಾರು 7-10 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿರಬಹುದು. ಅವರೆಲ್ಲರಿಗೂ ಖಾಯಂ ಮಾಡಿ ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ

ಎಂದರೆ ಸಾಕ್ಷಿ ಇಬ್ಬರನ್ನು ಹೊರತುಪಡಿಸಿ ಉಳಿದವರಿಗೆ ಖಾಯಂ ಮಾಡಿರುತ್ತಾರೆ. 41 ಜನ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ತೆಗೆದುಕೊಳ್ಳುವ ಅವಕಾಶ ಇಲ್ಲ ಹಾಗೂ ಉತ್ಪಾದನೆಯು ಸಹ ಇಲ್ಲ ಎನ್ನುತ್ತಾರೆ. ಕಾರ್ಮಿಕರನ್ನು ಲೇಆಫ್ ಮಾಡುವುದಕ್ಕೆ ಮುಂಚೆ ಎಷ್ಟು ಉತ್ಪಾದನೆ ಇತ್ತೋ ಅದಕ್ಕಿಂತ ಹೆಚ್ಚಿನ ಉತ್ಪಾದನೆ ಈಗ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಖಾಯಂ ಕೆಲಸ ಮಾಡುವ ಕಾರ್ಮಿಕರನ್ನು ತೆಗೆದು ಹಾಕಿ ಗುತ್ತಿಗೆ ಕೆಲಸ ಮಾಡುವಂತಹವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸಹ ಕಾರ್ಮಿಕ ಸಂಘದವರು ನಮಗೆ ಪತ್ರ ಬರೆದಿದ್ದು ಹಾಗೂ ಕಾರ್ಮಿಕ ಇಲಾಖೆ ಮುಂದೆ ಅರ್ಜಿ ಸಲ್ಲಿಸಿದ್ದು ಅವುಗಳ ಅರಿವು ನನಗೆ ಇರುತ್ತದೆ ಎಂದರೆ ಸರಿಯಲ್ಲ. ವಿದೇಶದಿಂದ ಬಂದಿದ್ದ ಆದೇಶಗಳನ್ನು ಮಾನ್ಯ ಮಾಡುವ ಸಲುವಾಗಿ ನಾವು ತುರ್ತಾಗಿ ಕೆಲವು ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೆವು ಎಂದರೆ ಸರಿಯಲ್ಲ. ಇರುವಂತಹ ಕೆಲಸಗಾರರು ಸಾಕಾಗುವುದಿಲ್ಲ ಎಂದು ಬೇರೆ ಕಾರ್ಖಾನೆಯಿಂದ ಉತ್ಪಾದನೆಯನ್ನು ತೆಗೆದು ಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಬೆಂಗಳೂರಿನ ಕಾರ್ಖಾನೆಯಿಂದಲೂ ಕೂಡ ಉತ್ಪಾದನೆ ಮಾಡಿಸಿ ಅದನ್ನು ರಫ್ತು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಇರುವ ಕಾರ್ಖಾನೆಗೆ ಬೇರೆ ಬೇರೆ ಕಡೆಯಿಂದ ಆದೇಶಗಳು ಬರುತ್ತಿದ್ದವು ಉತ್ಪಾದನೆ ಮಾಡಿ ಅವುಗಳನ್ನು ನಾವು ಬೇರೆ ಕಡೆಗೆ ಕಳುಹಿಸುತ್ತಿದ್ದೆವು ಎಂದರೆ ಸರಿಯಲ್ಲ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಓಟಿ ಕೆಲಸ ನೀಡಿ ಹೆಚ್ಚು ಉತ್ಪಾದನೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಕಾರ್ಮಿಕರನ್ನು ಕೆಲಸ ತೆಗೆದು ಹಾಕಿರುವುದವು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಕಾರ್ಮಿಕರ ಅವಶ್ಯಕತೆ ಇದ್ದರೂ ಸಹ ಈಗ ಇರುವ ಕಾರ್ಮಿಕರಿಗೆ ಓಟಿ ಕೊಟ್ಟು ರಿಟ್ರೆಂಚ್ ಆಗಿರು ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 10.11.2020

ರಲ್ಲಿ ಆಗಿರುವ ಒಪ್ಪಂದವನ್ನು ನಾವು ರದ್ದು ಮಾಡಿಲ್ಲ ಎಂದರೆ ಸರಿ. ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು  ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**